# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಾಸರಹಳ್ಳಿ ವಲಯ, ಪೀಣ್ಯ ಕೈಗಾರಿಕಾ ಪ್ರದೇಶ ಉಪ ವಿಭಾಗ

**ದಿನಾಂಕ: 19.09.2022 ರಂದು ಬೆಳಿಗ್ಗೆ 12.30 ಗಂಟೆಗೆ ಶ್ರೀ ಪುಟ್ಟಹನುಮಂತರಾಜು ನೋಡಲ್ ಅಧಿಕಾರಿ, ವಾರ್ಡ್ 23 ರವರ ಅಧ್ಯಕ್ಷತೆಯಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಕೈಗಾರಿಕಾ ಪ್ರದೇಶ ಉಪವಿಭಾಗ, ಹೆಚ್.ಎಮ್.ಟಿ.ಬಡಾವಣೆ, ನಾಗಸಂದ್ರ, ಬೆಂಗಳೂರು-73 ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು:**

**ಸಭೆಯಲ್ಲಿ ಹಾಜರಿದ್ದವರು:**

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಪುಟ್ಟಹನುಮಂತರಾಜು | ನೋಡಲ್ ಅಧಿಕಾರಿ-ವಾರ್ಡ್ ನಂ.23 |
| 2 | ಸ್ವಾಮಿ.ಕೆ.ಎಸ್ | ಸಹಾಯಕ ಅಭಿಯಂತರರು ವಾರ್ಡ್ ನಂ.23 |
| 3 | ಜಗದಿಶ್.ಹೆಚ್ | ಹಿರಿಯ ಆರೋಗ್ಯ ಪರಿವೀಕ್ಷಕರು |
| 4 | ರಮೇಶ್ ಕುಮಾರ್ | ಆರೋಗ್ಯ ಪರಿವೀಕ್ಷಕರು (ತಿಪ್ಪೇನಹಳ್ಳಿ ಪಿ.ಹೆಚ್.ಸಿ) |
| 5 | ರಾಜೇಶ್ ಎಸ್ ಆರ್ | ಸ.ಅ(RI-Dasarahalli) |
| 6 | ಕೆ.ಎಸ್.ಸುಧಾಮಣಿ | ಹಿರಿಯ ಪಶುವೈದ್ಯಕೀಯ ನಿರೀಕ್ಷಕರು (ದಾವ) |
| 7 | ಚಂದ್ರಜೆ | ಮಾರ್ಷಲ್ |
| 8 | ಸೌಮ್ಯ ಆರ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 9 | ಮನೋಜ್ ಕುಮಾರ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 10 | ಶಿವಣ್ಣ | ಬೀದಿ ದೀಪ ನಿರ್ವಹಣೆ |
| 11 | ಪುಟ್ಟೆಗೌಡ | ಮೌಲ್ಯ ಮಾಪಕರು |
| 12 | ದುಶ್ಯಂತ್ | ಬಿ.ಡಬ್ಲ್ಯೂಎಸ್ ಎಸ್ ಬಿ ಕಿರಿಯ ಅಭಿಯಂತರರು |
| 13 | ಶಶಿಕಾಂತ್ ಬೆಳ್ಳೂರ್ | ಕಂದಾಯ ವಸೂಲಿಗಾರರು |

**-:ನಡಾವಳಿಯ ವರದಿ:-**

➢ ಕಾರ್ಯದರ್ಶಿಗಳಾದ ಶ್ರೀ ಸ್ವಾಮಿ.ಕೆ.ಎಸ್ ಮಾತನಾಡುತ್ತಾ ಸಭೆಗೆ ಹಾಜರಾದನೋಡಲ್ಅಧಿಕಾರಿ ಹಾಗೂ ಪಾಲಿಕೆಯ ಅಧಿಕಾರಿಗಳು/ನೌಕರರಿಗೆ ಸ್ವಾಗತಕೋರಿದರು.

**<u>ವಿಷಯ ಸಂಖ್ಯೆ: 1 ಆರೋಗ್ಯ ಇಲಾಖೆ ಬಗ್ಗೆ</u>**

- ಆರೋಗ್ಯ ಕಾರ್ಯಕ್ರಮ ಅಭಿಯಾನ ದಿನಾಂಕ :-17.09.2022 ರಿಂದ 02.10.2022 ರವರೆಗೆ ತಾಯಿ ಆರೋಗ್ಯ ಕಾರ್ಯಕ್ರಮ ಹಾಗೂ ಮಕ್ಕಳ ಆರೋಗ್ಯ ತಪಾಸಣೆ ಕಾರ್ಯಕ್ರಮ ಮಾಡುತ್ತಿದ್ದಾರೆ. ತಯಿ ಆರೋಗ್ಯ ಕಾರ್ಯಕ್ರಮದಲ್ಲಿ ಗರ್ಭಿಣಿಯರಿಗೆ ಐರನ್ ಕ್ಯಾಲ್ಷಿಯಮ್ ಮಾತ್ರೆಗಳನ್ನು ಕೊಡುವುದು, ಮಂಗಳವಾರ ಮತ್ತು ಶುಕ್ರವಾರದಂದು ತಾಯಿ ಆರೋಗ್ಯ ಕಾರ್ಯಕ್ರಮ ಮಡುತ್ತಿದ್ದಾರೆ ಹಾಗೂ ಮಕ್ಕಳ ಆರೋಗ್ಯ ಕಾರ್ಯಕ್ರಮದಲ್ಲಿ ಇಂಜೆಕ್ಷನ್ (ಟಿಟಿ)ಕೊಡಲಾಗುವುದು ಹಾಗೂ ಯೋಗ ಧ್ಯಾನ ಕಾರ್ಯಕ್ರಮವನ್ನು ಆಯೋಜಿಸಬೇಕೆಂದು ಸರ್ಕಾರದಿಂದ ಆದೇಶ ಬಂದಿರುತ್ತದೆ. ಪ್ರಧಾನ ಮಂತ್ರಿ ಕ್ಷಯ ಮುಕ್ತ ಕಾರ್ಯಕ್ರಮವನ್ನು ನಡೆಸಲು ಎಲ್ಲಾ ಸಿಬ್ಬಂದಿಗಳು ಸಹಕರ ನೀಡಬೇಕೆಂದು ಸಭೆಯಲ್ಲಿ ಹಾಜರಿದ್ದ ಶ್ರೀ.ರಮೇಶ್ ಕುಮಾರ್ ಅರೋಗ್ಯ ಪರಿವೀಕ್ಷಕರು ರವರು ತಿಳಿಸಿದರು ಹಾಗೂ ಕೋವಿಡ್ ಲಸಿಕೆ ನಿಯಮಿತವಾಗಿ ನಿಡಲಾಗುತ್ತಿದೆ ಎಂದು ತಿಳಿಸಿದರು.

ಮು.ತಿನೋ

- ಡೆಂಗ್ಯೂ ಜ್ವರ ಉಲ್ಬಣಗೊಳುತ್ತಿರುವುದರಿಂದ ಸೊಳ್ಳೆ ಔಷದಿ ಸಿಂಪಡಿಸಲು ನೋಡಲ್ ಅಧಿಕಾರಿಗಳು ಸೂಚಿಸಿದರೂ.

**ವಿಷಯ ಸಂಖ್ಯೆ: 2:- ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳ ಅಭಿವೃದ್ಧಿ ಮತ್ತು ದುರಸ್ಥಿ**

ನೋಡಲ್ ಅಧಿಕಾರಿಗಳು ರಸ್ತೆ ಗುಂಡಿಗಳ ಬಗ್ಗೆ ಚರ್ಚಿಸುತ್ತಾ ಅನುಮತಿ ಇಲ್ಲದೆ ಕೇಬಲ್ ಸಂರ್ಪಕಗಳಿಗೆ ಅಗೆದಿರುವುದನ್ನು ಕಡ್ಡಾಯವಾಗಿ ನಿಯಂತ್ರಿಸಬೇಕೆಂದು ವಾರ್ಡ್ ಇಂಜಿನಿಯರ್‌ರವರಿಗೆ ಸೂಚಿಸಿದರೂ. ಬೆಸ್ಕಾಂ ಮತ್ತು ಬಿ.ಡಬ್ಲ್ಯೂಎಸ್‌ಎಸ್‌ಬಿ ರವರು ಸಹ ರಸ್ತೆ ಅಗೆಯುವ ಮುನ್ನ ನಮ್ಮ ಇಲಾಖೆಯಿಂದ ಅನುಮತಿ ಪಡೆಯಬೇಕೆಂದು ತಿಳಿಸಿದರುಅನವಶ್ಯವಾಗಿ ರಸ್ತೆ ಅಗೆಯುವುದರಿಂದ ವಾಹನ ಸವಾರರಿಗೆ ಮತ್ತು ಪಾದಚಾರಿಗಳಿಗೆ ತೊಂದರೆ ಹೆಚ್ಚಾಗಿರುತ್ತದೆ. ಆದುದರಿಂದ ಇದರ ಬಗ್ಗೆ ಕಟ್ಟು ನಿಟ್ಟವಾಗಿ ಕ್ರಮ ವಹಿಸಬೇಕೆಂದು ಸೂಚಿಸಿದರೂ.ಈಗಾಗಲೇ ಅಗೆದಿರುವ ರಸ್ತೆಗಳನ್ನು ಕ್ರಮವಾಗಿ ದುರಸ್ಥಿಗೊಳಿಸಬೇಕೆಂದು ತಿಳಿಸಿದರು

ಬಿ.ಡಬ್ಲ್ಯೂಎಸ್‌ಎಸ್‌ಬಿ ಇಲಾಖೆ ರವರು ಗುಂಡಿಗಳನ್ನು ತೆಗೆದಿದ್ದು ಸರಿಯಾದ ರೀತಿಯಲ್ಲಿ ದುರಸ್ಥಿ ಆಗಬೇಕು ಮತ್ತು ಸರ್ಕಾರಿ ರಜಾ ದಿನಗಳಲ್ಲಿ ಯಾವುದೇ ಅನುಮತಿ ಪಡೆಯದೇ ರಸ್ತೆಗಳನ್ನು ಅಗೆಯುತ್ತಿರುವುದು ವಾರ್ಡ್ ಪರಿವೀಕ್ಷಣೆ ವೇಳೆಯಲ್ಲಿ ಕಂಡು ಬಂದಿರುತ್ತದೆ. ಆದುದರಿಂದ ಈ ರೀತಿ ಮತ್ತೋಮ್ಮೆ ಅಗೆದಿರುವುದು ಕಂಡುಬಂದ್ದಲ್ಲಿ ನೇರವಾಗಿ ಸಂಬಂಧಪಟ್ಟವರ ವಿರುದ್ಧ ಎಫ್.ಐ.ಆರ್ ದಾಖಲಿಸಲಾಗುವುದು ಎಂದು ಸದರಿ ಇಲಾಖೆ ಅಧಿಕಾರಿಗಳಿಗೆ ರವರಿಗೆ ತಿಳಿಸಿದರು ರಸ್ತೆ ಕತ್ತರಿಸಿದ ಭಾಗದಲ್ಲಿ ಡಬ್ಲ್ಯೂಎಮ್.ಎಮ್ ಬಿ.ಸಿ. ಮತ್ತು ಬಿ.ಎಮ್ ಉಪಯೋಗಿಸಿ ದುರಸ್ಥಿ ಪಡಿಸುವ ಜವಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಸಹ ತಿಳಿಸಿದರು

**ವಿಷಯ ಸಂಖ್ಯೆ: 3 :- ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಚರಂಡಿಗಳಲ್ಲಿ ಹೂಳು & ಚರಂಡಿಗಳ ಅಭಿವೃದ್ಧಿ**

ನೋಡಲ್ ಅಧಿಕಾರಿಗಳು ಮಾತನಾಡಿ, ವಾರ್ಡ್ 23ರ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಚರಂಡಿಗಳಲ್ಲಿ ತುಂಬಿರುವ ಹೂಳನ್ನು ತೆರವುಗೊಳಿಸುವ & ಚರಂಡಿಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪ್ರಸ್ತಾಪಿಸಿದರು.

ಇದಕ್ಕೆ ಸಹಾಯಕ ಅಭಿಯಂತರರು ಮಾತನಾಡಿ, ಹಳೆಯ ವಾರ್ಡ್ ನಂ.41ಕ್ಕೆ ನೀಡಿದ್ದ ಕೆಲವು ಅನುದಾನದಲ್ಲಿ ರಸ್ತೆ ಬದಿಯ ಚರಂಡಿಗಳಲ್ಲಿನ ಹೂಳನ್ನು ತೆರವುಗೊಳಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು

**ವಿಷಯ ಸಂಖ್ಯೆ: 4 :- ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ಡೆಬ್ರಿಸ್ ಬಗ್ಗೆ**

ವಾರ್ಡ್ ವ್ಯಾಪ್ತಿಯಲ್ಲಿ ಬಿದ್ದಿರುವ ಡೆಬ್ರಿಸ್‌ಗಳನ್ನು ತೆರವುಗೊಳಿಸಲು ಘನ ತ್ಯಾಜ್ಯ ನಿರ್ವಹಣೆ ಇಲಾಕೆ ರವರು ಸಹಕರಿಸಬೇಕೆಂದು ನೋಡಲ್ ಅಧಿಕಾರಿಗಳು ಸೂಚಿಸಿದರೂ.

**ವಿಷಯ ಸಂಖ್ಯೆ: 5 :- ವಾರ್ಡ್ ವ್ಯಾಪ್ತಿಯಲ್ಲಿನ ಉದ್ಯಾನವನದಲ್ಲಿನ ನಿರ್ವಹಣೆಯ ಬಗ್ಗೆ**

ನೋಡಲ್ ಅಧಿಕಾರಿರವರು, ವಾರ್ಡ್ 23ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಬಗ್ಗೆ ಪ್ರಸ್ತಾಪಿಸಲಾಗೀ, ಉದ್ಯಾನವನಗಳಲ್ಲಿ ಸ್ವಚ್ಚತೆ ಕಾಪಾಡಲು ಹಾಗೂ ಮರಗಳಿಂದ ಉದಿರಿರುವ ಒಣ ಎಲೆಗಳನ್ನು ಸರಿಯಾದ ರೀತಿಯ ಹೊರಸಾಗಿಸಲು ಸೂಚಿಸಿದರೂ.

**ವಿಷಯ ಸಂಖ್ಯೆ: 6:- BBMP SAHAYA APP:**

- ಸ್ವಾಮಿ.ಕೆ.ಎಸ್, ಸಹಾಯಕ ಅಭಿಯಂತರರು, ವಾರ್ಡ್ ನಂ.23 ಮಾತನಾಡಿ ಹಳೆ ವಾರ್ಡ್ 41 ಕ್ಕೆ ಸಂಬಂಧಿಸಿದಂತೆ ನಮ್ಮ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಶೀಘ್ರಗತಿಯಲ್ಲಿ ಪರಿಹಾರ ಕ್ರಮ ಕೈಗೊಳ್ಳುತ್ತಿದ್ದು, ಯಾವುದೇ ಸಮಸ್ಯೆಗಳು ಬಾಕಿ ಇದ್ದಲ್ಲಿ ತ್ವರಿತಗತಿಯಲ್ಲಿ ನಿರ್ವಹಿಸಲಾಗುವುದು ಎಂದು ತಿಳಿಸಿದರು.

**ವಿಷಯ ಸಂಖ್ಯೆ: 7:- ಬೀದಿ ನಾಯಿಗಳ ಬಗ್ಗೆ**

- ಬೀದಿ ನಾಯಿಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ ಬುಧವಾರ ದಿನಾಂಕ ;21.09.2022 ರಂದು ಚೊಕ್ಕಸಂದ್ರ ಸರ್ಕಾರಿ ಶಾಲೆ ಬಳಿ ಆಯೋಜನೆ ಮಾಡಲಾಗಿದೆ. ಇದರೊಮದಿಗೆ ಕೋವಾ ಸ್ವಯಂ ಸೇವಾ ಸಂಸ್ಥೆಯು ಕೈ ಜೋಡಿಸಲಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಸುಧಾಮಣಿ ಹಿರಿಯ ಪಶುವೈದ್ಯಕೀಯ ನಿರೀಕ್ಷಕರು ರವರು ತಿಳಿಸಿದರು.

- **ವಿಷಯ ಸಂಖ್ಯೆ: 8:- ಬೋರ್‌ವೆಲ್‌ಗಳ ನಿರ್ವಹಣೆ ಬಗ್ಗೆ**

- ಮಾನ್ಯ ಪ್ರದಾನ ಅಭಿಯಂತರರು ಬಿ.ಬಿ.ಎಂ.ಪಿ ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೊಳವೆ ಬಾವಿಗಳ ವಿವರಗಳನ್ನು ಒದಗಿಸಲು ಸೂಚಿಸಿ ಬೆಂಗಳೂರು ನೀರು ಸರಬರಾಜುಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸಲು ಸೂಚಿಸಿರುತ್ತಾರೆ ಅದರಂತೆ ವಾರ್ಡ್ ವ್ಯಾಪ್ತಿಯಲ್ಲಿರುವ ಕೊಳವೆ ಬಾವಿಗಳ ವಿವರಗಳನ್ನು ನಿಗಧಿತ ನಮೂನೆಯಲ್ಲಿ ಸಲ್ಲಿಸಲು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ ಮತ್ತು ಬೆಸ್ಕಾಂ ಇಲಾಖೆಯವರೊಂದಿಗೆ ಸಮನ್ವಯದೊಂದಿಗೆ ಮಾಹಿತಿ ಪಡೆದು ಹಸ್ತಾಂತರಿಸಲು ವಾರ್ಡ್ ಇಂಜಿನಿಯರ್ ಅದ ಶ್ರೀ.ಕೆ.ಎಸ್.ಸ್ವಾಮಿ ರವರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು

- ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿ/ನೌಕರರಿಗೆ ಮತ್ತು ಸದಸ್ಯರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆಯೂ ಈ ಸಭೆಗಳಲ್ಲಿ ಪೂರ್ವತಯಾರಿಯೊಂದಿಗೆ ಪಾಲ್ಗೊಂಡು ವಾರ್ಡ್ ನಂ.23ರ ಅಭಿವೃದ್ಧಿಗೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

➢ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ಸ್ವಾಮಿ.ಕೆ.ಎಸ್ ರವರು ಸಭೆಗೆ ಹಾಜರಾದ ಎಲ್ಲಾ ಅಧಿಕಾರಿಗಳು/ನೌಕರರಿಗೂ ಮತ್ತು ಸದಸ್ಯರಿಗೂ ವಂದನೆಯನ್ನು ತಿಳಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ 23, ನೆಲಗದರನಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ವಾರ್ಡ್ ಸಮಿತಿ ಅಧ್ಯಕ್ಷರು**
**ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ**
**ವಾರ್ಡ್ 23, ನೆಲಗದರನಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

ಪ್ರತಿಯನ್ನು:

1) ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ, ರವರ ಆದ್ಯ ಗಮನಕ್ಕೆ ಸಲ್ಲಿಸಿದೆ
2) ಮಾನ್ಯ ವಲಯ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ
3) ಮಾನ್ಯ ವಲಯ ಜಂಟಿ ಆಯುಕ್ತರು, ದಾಸರಹಳ್ಳಿ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ ವಿಭಾಗ) ರವರ ಮಾಹಿತಿಗಾಗಿ ಸಲ್ಲಿಸಿದೆ.
5) ಸಹಾಯಕ ಕಂದಾಯ ಅಧಿಕಾರಿ (ಪೀಣ್ಯ ಕೈಗಾರಿಕಾ ಪ್ರದೇಶ) ರವರ ಮಾಹಿತಿಗಾಗಿ ಸಲ್ಲಿಸಿದೆ.
6) ಹಿರಿಯ/ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.23 ರವರ ಮಾಹಿತಿಗಾಗಿ ಕಳುಹಿಸಿದೆ.
7) ವಾರ್ಡ್ ಸಮಿತಿ ಸಭೆಯ ಸದಸ್ಯರಿಗೆ ಮಾಹಿತಿಗಾಗಿ ಕಳುಹಿಸಿದೆ.
8) ಕಛೇರಿ ಕಡತಕ್ಕೆ